## ಕಥೆಗಳಿಗೆ ಬೇಕು ನೈತಿಕ ಸಂಹಿತೆ

ಕಲರ್ಸ್ ಕನ್ನಡದ 'ರಾಮಾಚಾರಿ' ಧಾರಾವಾಹಿಯ ಮಾನ್ಯತಾಳ ನಡೆನುಡಿ ಅಹಂಕಾರದಿಂದ ಕೂಡಿದೆ. ರಾಮಾಚಾರಿ ಕುಟುಂಬಕ್ಕೆ ಅತಿಯಾಗಿ ಕೇಡು ಬಯಸುವುದು, ಹಣವನ್ನು ನಿರ್ಲಕ್ಷ್ಯದಿಂದ ನೋಡುವುದು, ಹಿರಿಯರಿಗೆ ಅಗೌರವ ತೋರುವುದು ಅತಿಯಾಯಿತು. ಒಂದು ಸಂಚಿಕೆಯಲ್ಲಿ ಸಿಗರೇಟನ್ನು ಸೇದುವ ದೃಶ್ಯವನ್ನು ಅನಗತ್ಯವಾಗಿ ತಂದಿದ್ದಾರೆ ಅನಿಸಿತು. ಮನೆಮಂದಿಯೆಲ್ಲ ಒಟ್ಟಿಗೆ ಟೀವಿಯನ್ನು ನೋಡುವಾಗ ಇಂತಹ ದೃಶ್ಯಗಳು ಬೇಸರ ತರಿಸುತ್ತವೆ. ಧೂಮಪಾನ ಹಾಗೂ ಮದ್ಯಪಾನ ಜೀವನಕ್ಕೆ ಹಾನಿಕರ ಎಂದು ಸಾರುವಾಗ, ಇಂತಹ ದೃಶ್ಯಗಳೇ ಧಾರಾವಾಹಿಗಳಲ್ಲಿ ಬರದಂತೆ ನೋಡಿಕೊಳ್ಳಬೇಕು. ಮಕ್ಕಳ ಮನಸಿನ ಮೇಲೆ ಇಂತಹ ದೃಶ್ಯಗಳು ದುಷ್ಪರಿಣಾಮ ಬೀರುತ್ತವೆ. ಮಾದಕದ ಬಗ್ಗೆ ಇಲ್ಲದ ಕುತೂಹಲವನ್ನು ಹುಟ್ಟಿಸಲು ಕಾರಣವಾಗುತ್ತದೆ. ಸಾರ್ವಜನಿಕರ ಭವಿಷ್ಯದ ಹಿತ ದೃಷ್ಟಿಯಿಂದ ಈ ರೀತಿಯ ಸನ್ನಿವೇಶಗಳು ಪ್ರಸಾರಕ್ಕೆ ಒಳ್ಳೆಯದಲ್ಲ.

—ಎಂ.ಎಸ್. ಉಷಾ ಪ್ರಕಾಶ್, ಮೈಸೂರು

## ಲಕ್ಷಣ: ಹಿರಿಯರಿಗೊಂದು ಸೂಕ್ಷ್ಮ ಪಾಠ

ಕಲರ್ಸ್ ಕನ್ನಡದ 'ಲಕ್ಷಣ' ಧಾರಾವಾಹಿಯಲ್ಲಿ ನಕ್ಷತ್ರ, ಭೂಪತಿ ಕಷ್ಟಪಡುತ್ತಿರುವುದಕ್ಕೆ, ಶಕುಂತಳಾ ದೇವಿ ಶ್ವೇತಾಳ ಹೆಸರಿಗೆ ಬರೆದುಕೊಟ್ಟ ಪವರ್ ಆಫ್ ಅಟಾರ್ನಿಯೇ ಕಾರಣ ಎಂದು ಪ್ರೇಕ್ಷಕರೆಲ್ಲಾ ತಿಳಿದುಕೊಂಡಿದ್ದಾರೆ. ತನ್ನ ಪರಿಶ್ರಮದಿಂದ ದೊಡ್ಡ ಉದ್ಯಮವನ್ನು ಬೆಳೆಸಿದ ಶಕುಂತಳಾ ದೇವಿ ಮಾಡಿಕೊಂಡಿರುವ ಮೂರ್ಖತನ ಹಳೆಯದು. ಈಕೆ ತನ್ನ ಸಕಲ ಉದ್ಯಮ, ಸಂಪತ್ತು ಎಲ್ಲವನ್ನೂ ತನ್ನ ಹೆಸರಲ್ಲೇ ಮಾಡಿಟ್ಟುಕೊಂಡು ಅದನ್ನೆಲ್ಲಾ ಈಗ ಶ್ವೇತಾಳಿಗೆ ಒಂದೇ ಕ್ಷಣದಲ್ಲಿ ಧಾರೆ ಎರೆದಿದ್ದಾಳೆ.

ತನ್ನ ಮಕ್ಕಳ ಮೇಲಿನ ಅಸಮಾಧಾನದಿಂದ ಅವರನ್ನು ಉದ್ಯಮದ ಪಾಲುದಾರಿಕೆ, ಲಾಭ, ಸಂಬಳ ಇವುಗಳಿಂದ ದೂರವಿಟ್ಟು ಈಗಿನ ಸ್ಥಿತಿಯಲ್ಲಿ ಮಕ್ಕಳ ಕೈಯಲ್ಲೂ ಬಿಡಿಗಾಸಿಲ್ಲದಂತೆ ಮಾಡಿದ್ದಾಳೆ. ತಾಯಿಯ ಜೊತೆ ದುಡಿಯುತ್ತಿದ್ದ ಮಕ್ಕಳು ಒಂದೇ ಬಾರಿ ನಿರ್ಗತಿಕರಾಗಿ ಒಂದೇ ಬುಟ್ಟಿಯಲ್ಲಿಟ್ಟ ಮೊಟ್ಟೆಗಳಂತೆ ಒಟ್ಟಿಗೇ ಕೆಟ್ಟು ಹೊರಬಿದ್ದಿದ್ದಾರೆ. ಕಂಪನಿಯ ತೆರಿಗೆ, ಕಾನೂನು ಸಲಹೆಗಾರರು ಶಕುಂತಳಾ ದೇವಿಗೆ ಮಾರ್ಗದರ್ಶನ ನೀಡುವಲ್ಲಿಯೂ ಸೋತಿದ್ದಾರೆ. ಇದನ್ನೆಲ್ಲಾ ಶ್ವೇತಾ ಅರಿತುಕೊಂಡಿದ್ದಳೇ? ಯಾರನ್ನೂ ನಂಬದೆ ಎಲ್ಲವನ್ನೂ ತಮ್ಮ ಮುಷ್ಟಿಯಲ್ಲಿಟ್ಟುಕೊಂಡಿರಬೇಕೆನ್ನುವ ಹಿರಿಯರಿಗೆ ಈ ಧಾರಾವಾಹಿ ಪಾಠ ಹೇಳುತ್ತಿದೆಯೇ? ಪ್ರಸಕ್ತ ಆಗುಹೋಗುಗಳ ಬಗ್ಗೆ ಕೂಡ ಕಥೆಗಾರರು ಯೋಚಿಸಲಿ.

—ಶ್ರೀಧರ ಬಾಣಾವರ, ಬೆಂಗಳೂರು

ವಾರದ ಪತ್ರ

## ಮನೋವಿಕಾಸಕ್ಕೆ ಪೂರಕವಾಗಿರಲಿ 'ಬಿಗ್ ಬಾಸ್'

ಕಲರ್ಸ್ ಕನ್ನಡದಲ್ಲಿ 'ಬಿಗ್ ಬಾಸ್' ಹೊಸ ಆವೃತ್ತಿ ಆರಂಭವಾಗುತ್ತಿದೆ. ಮೊದಲ ಆವೃತ್ತಿಯಲ್ಲಿ ಇದ್ದ ಕುತೂಹಲವನ್ನು ಉಳಿದ ಸರಣಿಯಲ್ಲಿ ಉಳಿಸಿಕೊಳ್ಳಲು ಸಾಧ್ಯ ಆಗಲಿಲ್ಲ. ಮಾತ್ರವಲ್ಲ, ಅದರ ಗುಣಮಟ್ಟದಲ್ಲಿಯೂ ಹೇಳುವಂತಹ ಬೆಳವಣಿಗೆ ಆಗಿಲ್ಲ. ಸ್ಪರ್ಧಿಗಳ ಆಯ್ಕೆಯ ಸಂದರ್ಭದಲ್ಲಿಯೇ ಋಣಾತ್ಮಕ ಪ್ರಚಾರಕ್ಕಿಂತ ಧನಾತ್ಮಕವಾಗಿ ಜನಜನಿತ ಆಗಿರುವ ವ್ಯಕ್ತಿತ್ವಗಳಿಗೆ ಹೆಚ್ಚಿನ ಒತ್ತು ನೀಡಬೇಕು. ಆಗ 'ಬಿಗ್ ಬಾಸ್' ರಂಜನೆಯ ಜೊತೆ ಹದವಾದ ತಿಳಿವಳಿಕೆಯನ್ನೂ ಮೈಗೂಡಿಸಿಕೊಳ್ಳಲು ಸಾಧ್ಯವಾಗುತ್ತದೆ.

ಸ್ಪರ್ಧಿಗಳಿಗೆ ನೀಡುವ ಟಾಸ್ಕ್‌ನಲ್ಲಿಯೂ ಜನೋಪಯೋಗಿ ಆಗುವಂತಹ ಆಟಗಳನ್ನು ರೂಪಿಸಲು ಸಾಧ್ಯತೆ ಇದೆ. ಮನರಂಜನೆಯೇ ಮುಖ್ಯ ಆಗಿದ್ದರೂ ಅದರಲ್ಲಿ ಸಾಮಾಜಿಕ, ಶೈಕ್ಷಣಿಕ ಕಾಳಜಿ ಇರಬಾರದು ಅಂತ ಏನೂ ಇಲ್ಲ. ಅಂತಹ ಪ್ರಯೋಗ ಮೊದಲನೇ ಕಂತಿನಲ್ಲಿ ನಡೆದಿತ್ತು. ಶಾಲಾ ಮಕ್ಕಳ ವೇಷವನ್ನು ಎಲ್ಲ ಸ್ಪರ್ಧಿಗಳಿಗೂ ನೀಡಿದ್ದರು. ಅಲ್ಲಿ ತುಂಟಾಟದ ನಡುವೆ ಏನೋ ಹೇಳುವ ಪ್ರಯತ್ನ ಇದೆ ಎನ್ನುವುದು ಗೊತ್ತಾಗುತ್ತಿತ್ತು. ಹೀಗೆ ರಚನಾತ್ಮಕ ಆಟಗಳನ್ನು ಆಡಿಸಬಹುದು. ಆರೋಗ್ಯ ಸಂಬಂಧಿ ಆಟ–ಯೋಗವನ್ನು ಕಲಿಸಬಹುದು. ಜ್ಞಾನ–ವಿಜ್ಞಾನಕ್ಕೆ ಪೂರಕವಾಗುವಂತೆಯೂ ಆಟಗಳನ್ನು ರೂಪಿಸಲಿ. ಜನಪದ ಕ್ರೀಡೆಗಳಿಗೆ ಜೀವ ತುಂಬುವ ಅವಕಾಶವೂ ಇದೆ. ಹೀಗೆ ಯೋಚಿಸಿದರೆ ಇನ್ನೂ ಹತ್ತು ಹಲವು ಹೊಳೆಯಬಹುದು. ಒಟ್ಟಾರೆ ಸೃಜನಶೀಲವಾಗಿ ಈ ಬಾರಿಯ 'ಬಿಗ್ ಬಾಸ್' ರೂಪಿಸಬೇಕು ಎಂದು ತಮ್ಮಲ್ಲಿ ವಿನಂತಿಸುತ್ತೇನೆ.

—ಆಜಾದ್ ಚಂದ್ರಶೇಖರ್ ಬೇಗೂರು, ಬೆಂಗಳೂರು



## ಮಲತಾಯಿ ಮತ್ಸರದ ಅತಿರೇಕ

ಸ್ಟಾರ್ ಸುವರ್ಣದ 'ರಾಣಿ' ಚೆನ್ನಾಗಿ ಮೂಡಿಬರುತ್ತದೆ. ಆಕೆಗೆ ಕಿವಿ ಕೇಳುವುದಿಲ್ಲ. ಗಂಡನ ಮನೆಯಲ್ಲಿ ಗುಣವಂತಳಂತೆ ನಡೆದುಕೊಳ್ಳುತ್ತಾಳೆ. ಒಳ್ಳೆಯ ಪಾತ್ರ. ಆದರೆ ಹುಡುಗನ ತಾಯಿ, ರಾಣಿಯ ಮೇಲೆ ಕುತಂತ್ರವನ್ನು ಹೆಣೆಯುತ್ತಾಳೆ. ಮನೆಯ ಸೊಸೆಯನ್ನು ತವರು ಮನೆಗೆ ಓಡಿಸಿ ಅರ್ಜುನನ ಆಸ್ತಿ ಪಡೆದುಕೊಳ್ಳಬೇಕು ಎಂಬುದು ಅವಳ ಮೂಲ ಉದ್ದೇಶ. ರಾಣಿ ಮತ್ತು ಅರ್ಜುನ ದಂಪತಿ ನೆಪಮಾತ್ರಕ್ಕೆ ಎನ್ನುವಂತೆ ಆಗಿದೆ. ಅವರಿಬ್ಬರೂ ಸಂಸಾರವನ್ನೇ ಮಾಡಿಲ್ಲ. ಏಕೆಂದರೆ ಅವರಿಗೆ ಮಕ್ಕಳಾದರೆ ತನಗೆ ಮನೆ, ಆಸ್ತಿ ದಕ್ಕುವುದಿಲ್ಲ ಎನ್ನುವ ಹೀನ ಯೋಚನೆ ಅವಳದು. ಸೌದಾಮಿನಿ ತನ್ನ ಹೆತ್ತತಾಯಿ ಅಲ್ಲ ಎಂಬುದು ಅರ್ಜುನನಿಗೆ ಇನ್ನೂ ಗೊತ್ತಾಗಿಲ್ಲ. ಮುಂದೆ ಈ ಕಥೆ ಎಲ್ಲಿಗೆ ಮುಟ್ಟುತ್ತದೆ ಎಂದು ನೋಡಬೇಕು.

—ಬಿ.ಎಸ್. ಮುಳ್ಳೂರ, ಹಲಗತ್ತಿ

## ದುಃಖಾಂತ್ಯವಾದರೂ ಪರವಾಗಿಲ್ಲ, ಮುಗಿಸಿ...

ಸ್ಟಾರ್ ಸುವರ್ಣದಲ್ಲಿ ಪ್ರಸಾರವಾಗುತ್ತಿರುವ 'ಪುನರಪಿ' ಧಾರಾವಾಹಿ ಹಳಿ ತಪ್ಪಿದಂತೆ ಕಾಣಿಸುತ್ತಿದೆ. ರಮ್ಯಾಳನ್ನು ಕೊಲ್ಲಲು ಪ್ರಜ್ಞಾಳ ಉಪಾಯಗಳು, ಮಾತನಾಡುವ ಧಾಟಿ, ಎಲ್ಲವೂ ಬದಲಾಗಿದೆ. ಮೊದಲಿದ್ದ ಕುತೂಹಲವನ್ನು ಇದು ಉಳಿಸಿಕೊಂಡಿಲ್ಲ. ತನ್ನ ಸೊಬಗನ್ನು ಕಾಪಾಡಿಕೊಳ್ಳಲು ಆಗದ ಈ ಧಾರಾವಾಹಿಯನ್ನು ದುಃಖಾಂತ್ಯವಾದರೂ ಅಡ್ಡಿಯಿಲ್ಲ. ಬೇಗ ಮುಗಿಸಿ, ವೀಕ್ಷಕರಿಗೆ ನೆಮ್ಮದಿ ನೀಡಲಿ.

—ಅನಸೂಯ ಟಿ., ತೀರ್ಥಹಳ್ಳಿ

## ಸತ್ಯವಂತರಿಗೆ ಕಾಲವಲ್ಲ! ಹೌದೇನಮ್ಮ ಗೀತಾ?

ಕಲರ್ಸ್ ಕನ್ನಡದ 'ಗೀತಾ' ಮೂರು ವರ್ಷದಿಂದ ಪ್ರಸಾರವಾಗುತ್ತಿದೆ. ಇತ್ತೀಚೆಗೆ ವಿಪರೀತ ಎನ್ನುವಷ್ಟು ಬೋರ್ ಹೊಡೆಸುತ್ತಿದೆ. ಇದರಲ್ಲಿ ಅಧರ್ಮದ ಜಯವನ್ನೇ ಮೆರೆಸುತ್ತಿರುವುದು ಯಾವ ಸಾರ್ಥಕತೆಗೆ ಎಂದು ಗೊತ್ತಾಗುತ್ತಿಲ್ಲ. ಸತ್ಯವಂತರಿಗೆ ಕಾಲವಲ್ಲ ಎನ್ನುವ ಈ ಧಾರಾವಾಹಿಯನ್ನು ನಿಲ್ಲಿಸುವುದು ಒಳ್ಳೆಯದು.

—ವಾಸುದೇವ, ಹಾಸನ